# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್, (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2179 (2350) |
| 3 | ಉತ್ತರಿಸಬೇಕಾದ ದಿನಾಂಕ | : | 27.03.2026 |
| 4 | ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು ಕೇಂದ್ರದ (VBGRAMG) ಯೋಜನೆಯನ್ನು ಒಪ್ಪಿರುತ್ತದೆಯೇ ಅಥವಾ ಇಲ್ಲವೆ; ಒಪ್ಪದಿದ್ದಲ್ಲಿ ಏಪ್ರಿಲ್ 01 ರಿಂದ ನರೇಗಾ ಕಾರ್ಮಿಕರಿಗೆ ಕೆಲಸ ಕೊಡಲು ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ; ಕಾರ್ಮಿಕರ ಜೀವನೋಪಾಯಕ್ಕಾಗಿ ಯಾವ ವ್ಯವಸ್ಥೆ ಮಾಡಿದೆ ಮಾಹಿತಿ ಒದಗಿಸುವುದು. | ಕರ್ನಾಟಕ ರಾಜ್ಯದ ಗ್ರಾಮೀಣ ಜನರ ಬದುಕಿನ ಹಕ್ಕನ್ನು ಕಾಪಾಡುವ ದೃಷ್ಟಿಯಿಂದ, ಒಕ್ಕೂಟ ತತ್ವಕ್ಕೆ ವಿರೋಧವಾಗಿರುವ ಮತ್ತು ರಾಜ್ಯದ ಬೊಕ್ಕಸಕ್ಕೆ ತೀವ್ರ ಹೊರೆ ಉಂಟು ಮಾಡುವ ಮತ್ತು ವಿಕೇಂದ್ರೀಕರಣ ತತ್ವಕ್ಕೆ ವಿರುದ್ಧವಾಗಿರುವ ಗ್ರಾಮಪಂಚಾಯಿತಿಗಳ ಅಧಿಕಾರ ಮತ್ತು ಹಕ್ಕುಗಳನ್ನು ಕಸಿದುಕೊಂಡಿರುವ ವಿಕಸಿತ್ ಭಾರತ್ ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್ ಆಜೀವಿಕ ಮಿಷನ್ (ಗ್ರಾಮೀಣ) (VB-GRAM-G) ಕಾಯ್ದೆಯನ್ನು ಕೇಂದ್ರ ಸರ್ಕಾರವು ತಕ್ಷಣವೇ ರದ್ದುಗೊಳಿಸಬೇಕು ಹಾಗೂ ಗ್ರಾಮೀಣ ಆಸ್ತಿ ಸೃಜನೆಗೆ ಮತ್ತು ಬಡವರ ಸ್ವಾವಲಂಬನೆಗೆ ಕಾರಣವಾಗಿದ್ದ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯನ್ನು (MGNREGS)ಈ ಹಿಂದಿನಂತೆ ಅದರ ಮೂಲ ಸ್ವರೂಪದಲ್ಲಿಯೇ ಮರುಸ್ಥಾಪಿಸಬೇಕು ಎಂದು ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಸದನವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ನಿರ್ಣಯವನ್ನು ಅಂಗೀಕರಿಸಿರುತ್ತದೆ.<br>ವಿಧಾನಸಭೆ ಹಾಗೂ ವಿಧಾನ ಪರಿಷತ್‌ನಿಂದ ಅಂಗೀಕೃತವಾದ ಸದರಿ ನಿರ್ಣಯದ ನಡವಳಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿರುತ್ತದೆ. **(ಅನುಬಂಧ-1** ರಲ್ಲಿ ಲಗತ್ತಿಸಿದೆ) |
| ಆ) | ರಾಜ್ಯ ಸರ್ಕಾರವೇ ಹೊಸ ಯೋಜನೆಯನ್ನು ರೂಪಿಸಲು ಯೋಜಿಸಿದ್ದಲ್ಲಿ ಯೋಜನೆ ಯಾವ ಹಂತದಲ್ಲಿದೆ ಅದಕ್ಕೆ ಬೇಕಾಗಿರುವ ತಾಂತ್ರಿಕ ವ್ಯವಸ್ಥೆಯನ್ನು (IT infrastructure) ರೂಪಿಸಲಾಗುತ್ತಿದೆಯೇ; ಮಾಹಿತಿ ಒದಗಿಸುವುದು. | |
| ಇ) | ನರೇಗಾ ಯೋಜನೆಯ ಮೇಲೆ ಅವಲಂಬಿತರಾಗಿದ್ದ ಹೊರಗುತ್ತಿಗೆ ನರೇಗಾ ಸಿಬ್ಬಂದಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆಯೇ ಮಾಹಿತಿ ಒದಗಿಸುವುದು. | |
| ಈ) | ರಾಜ್ಯದಲ್ಲಿ ನರೇಗಾ ಯೋಜನೆಯಡಿ ಎಷ್ಟು ಕಾಮಗಾರಿಗಳು ಪ್ರಗತಿಯಲ್ಲಿವೇ; ಇವುಗಳನ್ನು ಮುಕ್ತಾಯ ಮಾಡಲು ಪರ್ಯಾಯ ವ್ಯವಸ್ಥೆ ಏನು; ಅವುಗಳ ಹಣ ಪಾವತಿ ಹೇಗೆ ಮಾಹಿತಿ ಒದಗಿಸುವುದು. | ರಾಜ್ಯದಲ್ಲಿ ನರೇಗಾ ಯೋಜನೆಯಡಿ 550161 ಕಾಮಗಾರಿಗಳು ಪ್ರಗತಿಯಲ್ಲಿವೆ.<br>ಈ ಕಾಮಗಾರಿಗಳನ್ನು ಮುಕ್ತಾಯಗೊಳಿಸುವ ಸಂಬಂಧ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಈ ಕೆಳಕಂಡ ಪತ್ರಗಳಲ್ಲಿ ಅನುದಾನ ಬಿಡುಗಡೆಗೆ ಕೋರಿದೆ. (ಪ್ರತಿ ಲಗತ್ತಿಸಿದೆ)<br>ಆಯುಕ್ತರು ಗ್ರಾಮೀಣಾಭಿವೃದ್ಧಿ ಇವರ ಪತ್ರ ಸಂಖ್ಯೆ:: RDP 59 EGS 2021 (P-3) ದಿನಾಂಕ: 19.01.2026, 13.02.2026, 06.03.2026<br>ಸರ್ಕಾರದ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: RDC 59 EGS 2021 (P-4) ದಿನಾಂಕ: 17.02.2026 ಮತ್ತು 12.03.2026<br>ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: RDC 59 EGS 2021 (P-4) ದಿನಾಂಕ: 06.03.2026 |

**ಸಂಖ್ಯೆ: ಗ್ರಾಅಪ/133(25)/ಉಖಾಯೋ/2026, 2085842**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ
ತಂತ್ರಜ್ಞಾನ ಸಚಿವರು

ನರೇಗಾ

E-12080920

ಅನುಬಂಧ - 1

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಸಂವ್ಯಶಾಇ 36 ಪಶಾರ 2026

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು. ದಿನಾಂಕ: 05.03.2026.

**ಅನಧಿಕೃತ ಟಿಪ್ಪಣಿ**

**ವಿಷಯ :** ವಿಕಸಿತ್ ಭಾರತ್-ಗ್ಯಾರಂಟಿ ಫಾರ ರೋಜ್ಗಾರ್ ಮತ್ತು ಆಜೀವಿಕ ಮಿಷನ್ (ಗ್ರಾಮೀಣ) ಅಧಿನಿಯಮ, 2025 ನ್ನು ಕೇಂದ್ರ ಸರ್ಕಾರವು ತಕ್ಷಣವೇ ರದ್ದುಗೊಳಿಸಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ, 2005 ನ್ನು ಮರುಸ್ಥಾಪಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ವಿಧಾನ ಮಂಡಲದ ಉಭಯ ಸದನದಲ್ಲಿ ಅಂಗೀಕರಿಸಲಾದ ಅಧಿಕೃತ ನಿರ್ಣಯದ ಕುರಿತು.

**ಉಲ್ಲೇಖ:** ಇದೇ ಸಮ ಸಂಖ್ಯೆಯ ಪತ್ರ ದಿನಾಂಕ:27.02.2026 ಹಾಗೂ 03.03.2026.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳಲ್ಲಿ ವಿಕಸಿತ್ ಭಾರತ್-ಗ್ಯಾರಂಟಿ ಫಾರ್ ರೋಜ್ಗಾರ್ ಮತ್ತು ಆಜೀವಿಕ ಮಿಷನ್ (ಗ್ರಾಮೀಣ) ಅಧಿನಿಯಮ, 2025 ನ್ನು ಕೇಂದ್ರ ಸರ್ಕಾರವು ತಕ್ಷಣವೇ ರದ್ದುಗೊಳಿಸಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005 ನ್ನು ಮರುಸ್ಥಾಪಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿ ಅಂಗೀಕರಿಸಲಾದ ಅಧಿಕೃತ ನಿರ್ಣಯದ ಪ್ರತಿಯನ್ನು ಈಗಾಗಲೇ ಉಲ್ಲೇಖಿತ ಪತ್ರಗಳೊಂದಿಗೆ ಲಗತ್ತಿಸಿ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯಕ್ಕೆ ಕಳುಹಿಸಲಾಗಿರುತ್ತದೆ (ಪತ್ರಿ ಲಗತ್ತಿಸಿದೆ).

ಸದರಿ ವಿಷಯಕ್ಕೆ ಕರ್ನಾಟಕ ಸರ್ಕಾರ (ಕಾರ್ಯ ಕಲಾಪಗಳ ನಿರ್ವಹಣೆ) ನಿಯಮಗಳು, 1977ರನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಆಡಳಿತ ಇಲಾಖೆಯಾಗಿರುವುದರಿಂದ ಮುಂದಿನ ಪತ್ರ ವ್ಯವಹಾರವನ್ನು ನೇರವಾಗಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದೊಂದಿಗೆ ವ್ಯವಹರಿಸುವಂತೆ ಈ ಮೂಲಕ ಕೋರಲಾಗಿದೆ.

(ಕಾರ್ಯದರ್ಶಿಯವರಿಂದ ಅನುಮೋದಿತ)

Comm (RD)

B.V. Geethabai
**(ಬಿ.ವಿ. ಗೀತಾಬಾಯಿ)**
ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**ಇವರಿಗೆ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

IEC

16.03.26

IEC

"RPAD"

**GOVERNMENT OF KARNATAKA**

**No.** DPAL 36 PASHARA 2026

Karnataka Government Secretariat,

Dr. B.R. Ambedkar Veedhi,
Bengaluru, Dated:27.02.2026.

**From:**
The Secretary to Government,
Department of Parliamentary Affairs
and Legislation,Vidhana Soudha,
Dr. B.R. Ambedkar Veedhi,
Bengaluru - 560 001.

**To:**
The Joint Secretary (Judicial),
Ministry of Home Affairs (Judicial & PP Section),
4th Floor, Karthavya Bhavan,
New Delhi-110001.

**Sir,**

**Sub:** Official Resolution to immediately repeal the Vikasit Bharat Guarantee for Employment and Livelihood Mission (VB-GRAM-G) Act and restore the Mahatma Gandhi National Rural Employment Guarantee Act (MGNREGA) in its original form.

**Ref:** Karnataka Legislative Assembly. DO Letter No:KaViSaSa/ ShaRaSha/ 10/Aa.Ni/2025, Dated:13.02.2026.

******

With reference to the above subject, it is most respectfully informed that the Karnataka State Legislative Assembly and the Karnataka State Legislative Council on 04.02.2026 unanimously passed an Official Resolution to immediately repeal the Vikasit Bharat Guarantee for Employment and Livelihood Mission (VB-GRAM-G) Act and restore the Mahatma Gandhi National Rural Employment Guarantee Act (MGNREGA) in its original form.

...2

Accordingly, the Official Resolution (both in Kannada and English language) as passed by the Karnataka State Legislative Assembly is enclosed herewith for necessary action.

Yours faithfully,

**(G. Sridhar)**

Secretary to Government
Department of Parliamentary Affairs
and Legislation

**Copy to:**

(1) The Additional Chief Secretary to Hon'ble Chief Minister, Government of Karnataka, Vidhana Soudha.
(2) The ~~Additional Chief~~ Secretary to Government of Karnataka, Rural Development and Panchayat Raj Department.
(3) Private Secretary to Hon'ble Minister for Law, Justice, Human Rights, Parliamentary Affairs and Legislation and Tourism, Vidhana Soudha.
(4) The Secretary, Karnataka Legislative Assembly, Vidhana Soudha.
(5) Office Copy.

[illegible]

GOVERNMENT OF KARNATAKA

No. DPAL [illegible] PASHASA 2026

Karnataka Government Secretariat,
Vidhana Soudha
Dr. B.R. Ambedkar Veedhi,
Bengaluru, Dated:03.03.2026.

**From:**

The Secretary to Government,
Department of Parliamentary Affairs
and Legislation, Vidhana Soudha,
Dr. B.R. Ambedkar Veedhi,
Bengaluru - 560 001.

**To:**

The Joint Secretary (Judicial),
Ministry of Home Affairs (Judicial & PP Section),
4th Floor, Karthavya Bhavan,
New Delhi-110001.

**Sir,**

**Sub:** Official Resolution to immediately repeal the Vikasit Bharat Guarantee for Employment and Livelihood Mission (VB-GRAM-G) Act and restore the Mahatma Gandhi National Rural Employment Guarantee Act (MGNREGA) in its original form.

**Ref:** Karnataka Legislative Council DO Letter No:KaViPaSa/ShaRaSha/09/Aa.Ni/2026, Dated:27.02.2026.

******

With reference to the above subject, it is most respectfully informed that the Karnataka State Legislative Assembly and the Karnataka State Legislative Council on 04.02.2026 unanimously passed an Official Resolution to immediately repeal the Vikasit Bharat Guarantee for Employment and Livelihood Mission (VB-GRAM-G) Act and restore the Mahatma Gandhi National Rural Employment Guarantee Act (MGNREGA) in its original form.

..2

A copy of the Official Resolution (both in Kannada and English languages) as passed by the Karnataka State Legislative Council is enclosed herewith for necessary action.

Yours faithfully,

**(G. Sridhar)**
Secretary to Government
Department of Parliamentary Affairs
and Legislation

**Copy to:**

(1) The Additional Chief Secretary to Hon'ble Chief Minister, Government of Karnataka, Vidhana Soudha.
(2) The Additional Chief Secretary to Government of Karnataka, Rural Development and Panchayat Raj Department.
(3) Private Secretary to Hon'ble Minister for Law, Justice, Human Rights, Parliamentary Affairs and Legislation and Tourism, Vidhana Soudha.
(4) The Secretary, Karnataka Legislative Assembly, Vidhana Soudha.
(5) The Secretary, Karnataka Legislative Council, Vidhana Soudha
(6) Office Copy

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು
K.R. Mahalakshmi
Secretary
Karnataka Legislative Council

TELEPHONE OFF : 080-22250450
080-22033624 fax : 080-22256892
TEL. RESI : 080-26721377
E-mail : mahalakshmi.kr@ka.gov.in
ಅಂಚೆ ಪೆಟ್ಟಿಗೆ ಸಂಖ್ಯೆ: 5079
ಕೊಠಡಿ ಸಂಖ್ಯೆ: 156-ಸಿ, 1ನೇ ಮಹಡಿ,
ಡಾ.ಬಿ.ಆರ್. ಅಂಬೇಡ್ಕರ್ ವೀದಿ,
ವಿಧಾನ ಸೌಧ, ಬೆಂಗಳೂರು – 560 001
P.B. No. 5079
Room No.156-C, 1st Floor, Vidhana Soudha,
Dr.B.R. Ambedkar Veedhi, Bengaluru - 560 001

ಕವಿಪಸ/ಶಾರಶಾ/09/ಅ.ನಿ/2026 ದಿನಾಂಕ:27.02.2026

ಮಾನ್ಯರೆ,

ಕೇಂದ್ರ ಸರ್ಕಾರದ 'ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜಗಾರ್ ಮತ್ತು ಆಜೀವಿಕ ಮಿಷನ್ (ಗ್ರಾಮೀಣ) (VB-G-RAM-G)' ಕಾಯ್ದೆಯನ್ನು ರದ್ದುಪಡಿಸುವ ಮತ್ತು 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (MGNREGA)' ಕಾಯ್ದೆಯನ್ನು ಮರುಸ್ಥಾಪಿಸುವ ಕುರಿತ ನಿರ್ಣಯವನ್ನು ವಿಧಾನ ಪರಿಷತ್ತಿನ 158ನೇ ಅಧಿವೇಶನದಲ್ಲಿ ದಿನಾಂಕ:04.02.2026ರಂದು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಅಧಿಕೃತ ನಿರ್ಣಯವನ್ನು ಸದನವು ಅಂಗೀಕರಿಸಿರುತ್ತದೆ.

ಆದ್ದರಿಂದ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ಸದರಿ ನಿರ್ಣಯದ ನಡವಳಿಯ ಆಯ್ದ ಭಾಗವನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ.

ಆದರಗಳೊಂದಿಗೆ,

ತಮ್ಮ ನಂಬುಗೆಯ,

ಶ್ರೀ ಜಿ. ಶ್ರೀಧರ್,
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ,
ವಿಧಾನ ಸೌಧ, ಬೆಂಗಳೂರು.

2/3/26

# ಅಧಿಕೃತ ನಿರ್ಣಯ

## ಶ್ರೀ ಸಿದ್ಧರಾಮಯ್ಯ ಮಾನ್ಯ ಮುಖ್ಯಮಂತ್ರಿಯವರು_ ಅವರು:-

"ಈ ಸದನವು, ಭಾರತದ ಪ್ರಜಾಸತ್ತೆಯ ಭದ್ರಬುನಾದಿಯಾದ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಅಧಿಕಾರ ವಿಕೇಂದ್ರೀಕರಣದ ತತ್ವಗಳಿಗೆ ತನ್ನ ಸಂಪೂರ್ಣ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಗ್ರಾಮೀಣ ಬಡವರ ಪಾಲಿನ "ಸಂಜೀವಿನಿ"ಯಾಗಿದ್ದ ಮತ್ತು ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿದ್ದ "ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯ್ದೆ"ಯನ್ನು **(MGNREGA)** ರದ್ದುಗೊಳಿಸಿರುವುದನ್ನು ಈ ಸದನವು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತದೆ. ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ಜಾರಿಗೆ ತಂದಿರುವ ಹೊಸ "ವಿಬಿ-ಗ್ರಾಮ್ ಜಿ" **(VB-GRAM-G)** ಕಾಯ್ದೆಯು ಒಕ್ಕೂಟ ವ್ಯವಸ್ಥೆಯ ಮೂಲ ಆಶಯಗಳಿಗೆ ಮತ್ತು ಗ್ರಾಮೀಭಣ ಜನರ ಜೀವನೋಪಾಯದ ಹಕ್ಕಿಗೆ ಮಾರಕವಾಗಿದೆ.

ಗ್ರಾಮೀಣ ಬಡ ಕುಟುಂಬಗಳಿಗೆ ಆರ್ಥಿಕ ಭದ್ರತೆ ನೀಡುವ ಸಲುವಾಗಿ 2005 ರಲ್ಲಿ ಅಂದಿನ ಡಾ. ಮನ್ ಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ಜಾರಿಗೆ ತಂದಿತ್ತು. ಈ ಯೋಜನೆಯು ನಿರುದ್ಯೋಗ ನಿರ್ಮೂಲನೆ, ವಲಸೆ ತಡೆ, ಲಿಂಗ ತಾರತಮ್ಯವಿಲ್ಲದೆ ವೇತನ ನೀಡುವಿಕೆ, ಪಂಚಾಯತ್ ವಿಕೇಂದ್ರೀಕರಣದ ಬಲವರ್ಧನೆ ಹಾಗೂ ಗ್ರಾಮೀಣ ಜನರ ವೈಯಕ್ತಿಕ ಹಾಗೂ ಸಮುದಾಯ ಆಸ್ತಿಗಳ ಸೃಜನೆಯಿಂದ ಕ್ರಾಂತಿಕಾರಿ ಬದಲಾವಣೆ ತಂದಿದೆ.

ಹೊಸ ಕಾಯ್ದೆಯು ಸಂವಿಧಾನದ 21ನೇ ಅನುಚ್ಛೇದದಡಿ ಸಿಗುವ ಜೀವಿಸುವ ಹಕ್ಕನ್ನು ಮತ್ತು ಜೀವನೋಪಾಯದ ಹಕ್ಕನ್ನು ಉಲ್ಲಂಘಿಸುತ್ತದೆ ಹಾಗೂ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ನೀಡಲಾದ ಅಧಿಕಾರವನ್ನು ಮತ್ತು ಸ್ವಾಯತ್ತತೆಯನ್ನು ಕಸಿದುಕೊಳ್ಳುವ ಮೂಲಕ, ಸಂವಿಧಾನದ 73ನೇ ತಿದ್ದುಪಡಿಯ

ಆಶಯಕ್ಕೆ ವಿರುದ್ಧವಾಗಿರುವುದಲ್ಲದೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಕಲ್ಪನೆಯ ಗ್ರಾಮ ಸ್ವರಾಜ್ಯದ ಉದ್ದೇಶವನ್ನು ಸಹ ವಿಫಲಗೊಳಿಸುತ್ತದೆ. ಮನರೇಗ ಕಾಯ್ದೆಯಲ್ಲಿ ಕೇಂದ್ರ ಸರ್ಕಾರವೇ 100 ಮಾನವ ದಿನಗಳ ಕೂಲಿ ಹಣವನ್ನು ಶೇ.100 ರಷ್ಟು ಸಂಪೂರ್ಣವಾಗಿ ಭರಿಸುತ್ತಿತ್ತು. ರಾಜ್ಯಗಳ ಜೊತೆ ಸಮಾಲೋಚಿಸದೆ, ಕೇಂದ್ರವು ಏಕಾಏಕಿ ರಾಜ್ಯ ಸರ್ಕಾರಗಳು ಶೇ. 40 ರಷ್ಟು ಅನುದಾನವನ್ನು ಭರಿಸಬೇಕೆಂಬ ನಿಯಮವನ್ನು ಹೇರಿದೆ. ಇದರಿಂದ 125 ಮಾನವ ದಿನಗಳ ಕೆಲಸ ಒದಗಿಸುವುದಾಗಿ ಹೊಸ ಕಾಯ್ದೆಯಲ್ಲಿ ಹೇಳಲಾಗಿದ್ದರೂ, ವಾಸ್ತವವಾಗಿ 50 ಮಾನವ ದಿನಗಳ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸಬೇಕಾಗುತ್ತದೆ. ಇದು ಒಕ್ಕೂಟ ವ್ಯವಸ್ಥೆಯ ರಚನೆಯ ಮೇಲೆ ಗಂಭೀರ ಪರಿಣಾಮ

2/-

ಬೀರುತ್ತದೆ ಹಾಗೂ ಸಂವಿಧಾನದ ಅನುಚ್ಛೇದ 258 ಮತ್ತು ಅನುಚ್ಛೇದ 280 ಗಳನ್ನು ಸ್ಪಷ್ಟ ಉಲ್ಲಂಘನೆ ಮಾಡಿದೆ.

ಕರ್ನಾಟಕವು ದೇಶದಲ್ಲೇ ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಲಲ್ಲಿ ಎರಡನೇ ಸ್ಥಾನದಲ್ಲಿದೆ. ನಮ್ಮ ಗ್ರಾಮ ಪಂಚಾಯಿತಿಗಳು ಅತಿ ಹೆಚ್ಚು ತೆರಿಗೆ ಸಂಗ್ರಹಿಸುವ ಮೂಲಕ ಕರ್ನಾಟಕವು ದೇಶದಲ್ಲಿಯೆ ಮೊದಲ ಸ್ಥಾನದಲ್ಲಿದೆ. ವಿಕೇಂದ್ರಿಕರಣ ವ್ಯವಸ್ಥೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿರುವುದರಲ್ಲಿ ಕೂಡ ರಾಜ್ಯವು ಮೊದ ಸ್ಥಾನದಲ್ಲಿದೆ.

ಕರ್ನಾಟಕಕ್ಕೆ 14ನೇ ಹಣಕಾಸು ಆಯೋಗದಲ್ಲಿ ಶೇ. 4.71 ರಷ್ಟು ತೆರಿಗೆ ಹಂಚಿಕೆಯನ್ನು ಶಿಫಾರಸ್ಸು ಮಾಡಲಾಗಿತ್ತು. 15ನೇ ಹಣಕಾಸು ಆಯೋಗದಲ್ಲಿ ಶೇ. 3.64 ಕ್ಕೆ ಇಳಿಕೆಯಾಗಿತ್ತು. ಈಗ 16ನೇ ಹಣಕಾಸು ಆಯೋಗದ ಶಿಫಾರಸಿನಲ್ಲಿ ಶೇ. 4.131 ರಷ್ಟು ಹಂಚಿಕೆ ಮಾಡಿದ್ದರೂ, ಅದು 14ನೇ ಹಣಕಾಸು ಆಯೋಗದ ಶಿಫಾರಸ್ಸಿಗಿಮತ ಶೇ. 14.1 ರಷ್ಟು ಕಡಿಮೆ ಆಗಿದೆ. ಇಂತಹ ಸಂದಿಗ್ಧ ಸಮಯದಲ್ಲಿ, ಹೊಸ ಕಾಯ್ದೆಯ ಮೂಲಕ ಯೋಜನೆಯ ಅನುಷ್ಠಾನದಲ್ಲಿ ಶೇ.40 ರಷ್ಟು ಹೊರೆಯನ್ನು ರಾಜ್ಯದ ಮೇಲೆ ಹೊರಿಸುತ್ತಿರುವುದು ರಾಜ್ಯದ ಆರ್ಥಿಕ ಭದ್ರತೆಯನ್ನು ಮತ್ತು ಅಭಿವೃದ್ಧಿಯನ್ನು ಅಪಾಯಕ್ಕೆ ದೂಡುವ ಹುನ್ನಾರವಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಲ್ಲಿ ಉದ್ಯಯೋಗವು ಪ್ರತಿಯೊಬ್ಬ ವ್ಯಕ್ತಿಯ 'ಹಕ್ಕು' ಹಾಗೂ 'ಬೇಡಿಕೆ' ಆಧಾರಿತ'ವಾಗಿತ್ತು. ಆದರೆ ಹೊಸ ಕಾಯ್ದೆಯಲ್ಲಿ ಇದನ್ನು ಕೇಂದ್ರ ಸರ್ಕಾರ ರೂಪಿಸುವ ಮಾನದಂಡಗಳ ಹಂಗಿಗೆ ಒಳಪಡಿಸಿ ಜನರ ಹಕ್ಕನ್ನು ಕಸಿದುಕೊಳ್ಳಲಾಗಿದೆ. ದೆಹಲಿಯ ದಂತ ಗೋಪುರದಲ್ಲಿ ಕುಳಿತು ಯೋಜನೆಗಳನ್ನು ರೂಪಿಸುವ ಮೂಲಕ, ಗ್ರಾಮಸಭೆಗಳ ಅಧಿಕಾರವನ್ನು ಕಿತ್ತುಕೊಳ್ಳಲಾಗಿದೆ. ಗ್ರಾಮ ಪಂಚಾಯತಿಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಕಾಮಗಾರಿಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಕಳೆದುಕೊಂಡಿವೆ. ಕೇಂದ್ರ ಸರ್ಕಾರ ಆಯ್ಕೆ ಮಾಡಿದ ಪಂಚಾಯತಿಗಳಲ್ಲಿ ಮಾತ್ರ ಯೋಜನೆ ಜಾರಿಯಾಗುತ್ತಿದ್ದು, ಉಳಿದ ಕಡೆಗಳಲ್ಲಿ ಉದ್ಯೋಗದ ಹಕ್ಕನ್ನು ನಿರಾಕರಿಸಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯಡಿ ನಮ್ಮ ಹೊಲ-ನಮ್ಮ ದಾರಿ, ದನದ ಕೊಟ್ಟಿಗೆ, ಕುರಿ ದೊಡ್ಡಿ, ಕಣ, ಶಾಲಾ ಕಾಂಪೌಂಡ್, ಶೌಚಾಲಯ, ಬದು, ಹೊಳಗಟ್ಟೆ, ಪಂಚಾಯತಿ ಕಟ್ಟಡ (ರಾಜೀವ ಗಾಂಧಿ ಸೇವಾ ಕೇಂದ್ರ), ತೋಟಗಾರಿಕೆ ಬೆಳೆಗಳು, ಆಟದ ಮೈದಾನದಂತಹ ಸ್ಥಳೀಯವಾಗಿ ಅಗತ್ಯವಿರುವ ಗ್ರಾಮೀಣ ಆಸ್ತಿಗಳನ್ನು ನಿರ್ಮಿಸಲಾಗುತ್ತಿತ್ತು. ಹೊಸ ಕಾಯ್ದೆಯನ್ನು "ಪಿ.ಎಂ ಗತಿಶಕ್ತಿ" ಯೋಜನೆಗೆ ಜೋಡಿಸಿರುವುದರಿಂದ, ದೊಡ್ಡ ರಸ್ತೆಗಳು ಮತ್ತು ಹೈವೆಗಳ ನಿರ್ಮಾಣಕ್ಕೆ ಬಳಕೆಯಾಗುತ್ತಿದ್ದು, ಇದು ಪರೋಕ್ಷವಾಗಿ ಗುತ್ತಿಗೆದಾರರು ಮತ್ತ ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಮಾಡಿಕೊಡವ ಯೋಜನೆಯಾಗಿ ಮಾರ್ಪಟ್ಟಿದೆ. ಇದು ಬಡವರ ಕೈಯಿಂದ ಅನ್ನ ಕಸಿದುಕೊಂಡು ಉಳ್ಳವರನ್ನು ಇನ್ನಷ್ಟು ಶ್ರೀಮಂತರನ್ನಾಗಿ ಮಾಡುವ ಯೋಜನೆಯಾಗಿದೆ.

ಈ ಹೊಸ ಕಾಯ್ದೆಯ ವರ್ಷಕ್ಕೆ 12 ತಿಂಗಳ ಬದಲು ಕೇವಲ 10 ತಿಂಗಳು ಮಾತ್ರ ಕೆಲಸಕ್ಕೆ ಅವಕಾಶ ನೀಡುತ್ತದೆ. ವಿಬಿ-ಗ್ರಾಮ್-ಜಿ ಕಾಯ್ದೆಯಡಿ ಎಲ್ಲಾ ಗ್ರಾಮ ಪಂಚಾಯತಿಗಳು ಸೇರ್ಪಡೆಗೊಳ್ಳುವ ಖಚಿತತೆ ಇಲ್ಲ ಹಾಗೂ ಕಾರ್ಮಿಕರಿಗೆ ನೀಡಲಾಗುವ ಕೂಲಿ ದರದ ಬಗ್ಗೆ ಯಾವುದೇ ಖಚಿತತೆ / ಖಾತ್ರಿ ಇಲ್ಲ. ಈ ಅನಿಶ್ಚಿತತೆಯು ಗ್ರಾಮೀಣ ಭಾಗದ ಕೂಲಿ ಕಾರ್ಮಿಕರು ವಿಶೇಷವಾಗಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾರ್ಮಿಕರು, ಆದಿವಾಸಿಗಳು, ರೈತಾಪಿ ಜನರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ. ಗ್ರಾಮೀಣ ಭಾಗದ ಕೂಲಿ ಕಾರ್ಮಿಕರನ್ನು ಆಧುನಿಕ ಗುಲಾಮಗಿರಿಗೆ ತಳ್ಳುವ ಪ್ರಯತ್ನವಾಗಿದೆ.

ಆದುದರಿಂದ, ಈ ಮೇಲೆ ವಿವರಿಸದ ಪ್ರಮುಖ ಕಾರಣಗಳಿಂದ ಕೇಂದ್ರದ ಈ ನಡೆಯನ್ನು ಈ ಸದನವು ತೀವ್ರವಾಗಿ ವಿರೋಧಿಸುತ್ತದೆ.

ಈ ಮೇಲ್ಕಂಡ ಎಲ್ಲ ಗಂಭೀರ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ರಾಜ್ಯದ ಗ್ರಾಮೀಣ ಜನರ ಬದುಕಿನ ಹಕ್ಕನ್ನು ಕಾಪಾಡುವ ದೃಷ್ಟಿಯಿಂದ, ಒಕ್ಕೂಟ ತತ್ವಕ್ಕೆ ವಿರೋಧವಾಗಿರುವ ಮತ್ತು ರಾಜ್ಯದ ಬೊಕ್ಕಸಕ್ಕೆ ತೀವ್ರ ಹೊರೆ ಉಂಟುಮಾಡುವ ಮತ್ತು ವಿಕೇಂದ್ರೀಕರಣ ತತ್ವಕ್ಕೆ ವಿರುದ್ಧವಾಗಿರುವ ಗ್ರಾಮ ಪಂಚಾಯಿತಿಗಳ ಅಧಿಕಾರ ಮತ್ತು ಹಕ್ಕುಗಳನ್ನು ಕಸಿದುಕೊಂಡಿರುವ ವಿಕಸಿತ್ ಭಾರತ್ ಗ್ಯಾರಂಟಿ ಫಾರ್ ರೋಜ್ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) **(VB-GRAM-G)** ಕಾಯ್ದೆಯನ್ನು ಕೇಮದ್ರ ಸರ್ಕಾರವು ತಕ್ಷಣವೇ ರದ್ದುಗೊಳಿಸಬೇಕು ಹಾಗೂ ಗ್ರಾಮೀಣ ಆಸ್ತಿ ಸೃಜನೆಗೆ ಮತ್ತು ಬಡವರ ಸ್ವಾವಲಂಬನೆಗೆ ಕಾರಣವಾಗಿದ್ದ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು **(MGNREGA)**" ಈ ಹಿಂದಿನಂತೆ ಅದರ ಮೂಲ ಸ್ವರೂಪದಲ್ಲಿಯೇ ಮರುಸ್ಥಾಪಿಸಬೇಕು ಎಂದು ಈ ಸದನವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ."

**ನಿರ್ಣಯವನ್ನು ಸದನವು ದಿನಾಂಕ:04.02.2026 ರಂದು ಅಂಗೀಕರಿಸಿರುತ್ತದೆ.**

**(ಕೆ. ಆರ್. ಮಹಾಲಕ್ಷ್ಮಿ)**
**ಕಾರ್ಯದರ್ಶಿ,**
**ಕರ್ನಾಟಕ ವಿಧಾನ ಪರಿಷತ್ತು**

## OFFICIAL RESOLUTION

**By Shri. Siddaramaiah (Hon'ble Chief Minister):-**

"This House reiterates absolute full commitment towards the Panchayath Raj system and the principles of decentralization of power, which are the secured foundation for Indian democracy. This House takes the most serious view of the repeal of the "Mahatma Gandhi National Rural Employment Guarantee Act" (MGNREGA), which was a 'Sanjeevini' for the rural poor and an integral part of rural life. The new 'VB-GRAM-G' Act, unilaterally implemented by the Central Government, is detrimental to the basic ideals of the federal system and the right to livelihood of the rural people.

Then UPA government led by Dr. Manmohan Singh had implemented the Mahathma Gandhi National Rural Employment Guarantee Act in 2005, in order to provide financial security to the rural poor families. This scheme has brought about a revolutionary change by eliminating unemployment, stopping migration, providing wages without gender discrimination, strengthening decentralization of Panchayath and creating individual and community assets of the rural people.

The new law violates the right to life and the right to livelihood under Article 21 of the Constitution and by taking away the powers and autonomy given to the Gram Panchayats through the 73rd Amendment to the Constitution, it is not only against the intention of the 73rd Amendment to the Constitution but also defeats the objective of Gram Swaraj as envisioned by Mahatma Gandhi the Father of the Nation. In the MGNREGA Act, the Central Government was absolutely providing 100 percent of the wages for 100 human-days. The Central Government has suddenly imposed a rule that the state governments should bear 40 percent of the grant without consulting the states. Due to this, eventhough the work for 125 human-days are provided in the new Act, the cost of 50 human-days to be borne by the State Governments, This will have a serious impact on the structure of the federal system and is a clear violation of Articles 258 and 280 of the Constitution

Karnataka is the second highest tax paying state in the country. Since our Gram Panchayats are collecting the highest tax, Karnataka

stands first in the country. Our State is also the first in implementing the decentralization system in a coherent manner.

The 14th Finance Commission has recommended a tax share of 4.71 percent for Karnataka. It has been reduced to 3.64 percent in the 15th Finance Commission. Now, although the 16th Finance Commission has recommended a share of 4.131 per cent, it is 14.1 percent less than the 14th Finance Commission recommendation. In such critical times, imposing a 40 percent burden on the state in implementation of the scheme through a new law is an attempt to jeopardize the State's economic security and development.

In the Mahatma Gandhi National Rural Employment Guarantee Act, employment was a 'right' and 'demand' based on every individual. But in the new act, this has been made subject to the norms formulated by the Central Government, thereby taking away the rights of the people. The power of the Gram Sabhas have been taken away, through plans formulated by sitting in the ivory tower of Delhi. The Gram Panchayats have lost the freedom to select the works as per their needs. The scheme is being implemented only in the Panchayats selected by the central government, and the right to employment has been denied in the rest of the panchayats.

Locally needed rural assets such as our farmland, our roads, cowsheds, sheep sheds, granaries, school compounds, toilets, fieldends, flow-barriers, Panchayat buildings (Rajiv Gandhi Seva Kendras), horticultural crops, playgrounds were being built under the Mahatma Gandhi National Rural Employment Guarantee Act. Since the new Act is linked to the 'PM Gatishakti' scheme, it is being used for the construction of major roads and highways, which has indirectly turned into a scheme that benefits contractors and corporate companies. It is a scheme that snatches food from the hands of the poor to make the rich into much richer.

This new Act allows work for only 10 months in a year instead of 12 months. There is no certainty that all Gram Panchayats will be included under the VB-Gram-G Act and there is no assurance / guarantee about the wage rate paid to the workers. This uncertainty has deprived the rights of rural wage workers, especially women, Scheduled Caste and

Scheduled Tribe workers, tribals, and farmers. It is an attempt to push rural wage workers into modern slavery.

Therefore, this House strongly opposes this move of the Central Government due to the important reasons explained above.

By considering all the above facts and in view of protecting the right to life of the rural people of Karnataka, this House urges the Central Government to immediately repeal the Vikasit Bharat Guarantee for Employment and Livelihood Mission (Gramin) (VB-GRAM-G) Act, which is against the federal principle, is a severe burden on the state exchequer and is against the principle of decentralization, and has taken away the powers and rights of the Gram Panchayats, and to reinstate the "Mahatma Gandhi National Rural Employment Guarantee Act (MGNREGA)" in its original form, which has led to rural asset creation and self-reliance of the poor.

**The resolution has been passed by the House on 04.02.2026.**

**(K.R. Mahalakshmi)**
**Secretary,**
**Karnataka Legislative Council.**

"04ನೇ ಫೆಬ್ರವರಿ, 2026 ರಂದು ನಡೆದ ಕರ್ನಾಟಕ ವಿಧಾನಸಭೆಯ ನಡವಳಿಗಳಿಂದ ಆಯ್ದ ಭಾಗ"

# ಅಧಿಕೃತ ನಿರ್ಣಯ

## ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು) ಅವರು :-

"ಈ ಸದನವು, ಭಾರತದ ಪ್ರಜಾಸತ್ತೆಯ ಭದ್ರಬುನಾದಿಯಾದ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಅಧಿಕಾರ ವಿಕೇಂದ್ರೀಕರಣದ ತತ್ವಗಳಿಗೆ ತನ್ನ ಸಂಪೂರ್ಣ ಬದ್ಧತೆಯನ್ನು ಪುನರುಚ್ಚರಿಸುತ್ತದೆ. ಗ್ರಾಮೀಣ ಬಡವರ ಪಾಲಿನ 'ಸಂಜೀವಿನಿ'ಯಾಗಿದ್ದ ಮತ್ತು ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿದ್ದ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ"ಯನ್ನು (MGNREGA) ರದ್ದುಗೊಳಿಸಿರುವುದನ್ನು ಈ ಸದನವು ಅತ್ಯಂತ ಗಂಭೀರವಾಗಿ ಪರಿಗಣಿಸುತ್ತದೆ. ಕೇಂದ್ರ ಸರ್ಕಾರವು ಏಕಪಕ್ಷೀಯವಾಗಿ ಜಾರಿಗೆ ತಂದಿರುವ ಹೊಸ 'ವಿಬಿ-ಗ್ರಾಮ್ ಜಿ' (VB-GRAM-G) ಕಾಯ್ದೆಯು ಒಕ್ಕೂಟ ವ್ಯವಸ್ಥೆಯ ಮೂಲ ಆಶಯಗಳಿಗೆ ಮತ್ತು ಗ್ರಾಮೀಣ ಜನರ ಜೀವನೋಪಾಯದ ಹಕ್ಕಿಗೆ ಮಾರಕವಾಗಿದೆ.

ಗ್ರಾಮೀಣ ಬಡ ಕುಟುಂಬಗಳಿಗೆ ಆರ್ಥಿಕ ಭದ್ರತೆ ನೀಡುವ ಸಲುವಾಗಿ 2005 ರಲ್ಲಿ ಅಂದಿನ ಡಾ. ಮನ್ ಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ಜಾರಿಗೆ ತಂದಿತ್ತು. ಈ ಯೋಜನೆಯು ನಿರುದ್ಯೋಗ ನಿರ್ಮೂಲನೆ, ವಲಸೆ ತಡೆ, ಲಿಂಗ ತಾರತಮ್ಯವಿಲ್ಲದೆ ವೇತನ ನೀಡುವಿಕೆ, ಪಂಚಾಯತ್ ವಿಕೇಂದ್ರೀಕರಣದ ಬಲವರ್ಧನೆ ಹಾಗೂ ಗ್ರಾಮೀಣ ಜನರ ವೈಯಕ್ತಿಕ ಹಾಗೂ ಸಮುದಾಯ ಆಸ್ತಿಗಳ ಸೃಜನೆಯಿಂದ ಕ್ರಾಂತಿಕಾರಿ ಬದಲಾವಣೆ ತಂದಿದೆ.

ಹೊಸ ಕಾಯ್ದೆಯು ಸಂವಿಧಾನದ 21ನೇ ಅನುಚ್ಛೇದದಡಿ ಸಿಗುವ ಜೀವಿಸುವ ಹಕ್ಕನ್ನು ಮತ್ತು ಜೀವನೋಪಾಯದ ಹಕ್ಕನ್ನು ಉಲ್ಲಂಘಿಸುತ್ತದೆ ಹಾಗೂ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ನೀಡಲಾದ ಅಧಿಕಾರವನ್ನು ಮತ್ತು ಸ್ವಾಯತ್ತತೆಯನ್ನು ಕಸಿದುಕೊಳ್ಳುವ ಮೂಲಕ, ಸಂವಿಧಾನದ 73ನೇ ತಿದ್ದುಪಡಿಯ

ಆಶಯಕ್ಕೆ ವಿರುದ್ಧವಾಗಿರುವುದಲ್ಲದೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಕಲ್ಪನೆಯ ಗ್ರಾಮ ಸ್ವರಾಜ್ಯದ ಉದ್ದೇಶವನ್ನು ಸಹ ವಿಫಲಗೊಳಿಸುತ್ತದೆ. ಮನರೇಗ ಕಾಯ್ದೆಯಲ್ಲಿ ಕೇಂದ್ರ ಸರ್ಕಾರವೇ 100 ಮಾನವ ದಿನಗಳ ಕೂಲಿ ಹಣವನ್ನು ಶೇ.100 ರಷ್ಟು ಸಂಪೂರ್ಣವಾಗಿ ಭರಿಸುತ್ತಿತ್ತು. ರಾಜ್ಯಗಳ ಜೊತೆ ಸಮಾಲೋಚಿಸದೆ, ಕೇಂದ್ರವು ಏಕಾಏಕಿ ರಾಜ್ಯ ಸರ್ಕಾರಗಳು ಶೇ. 40 ರಷ್ಟು ಅನುದಾನವನ್ನು ಭರಿಸಬೇಕೆಂಬ ನಿಯಮವನ್ನು ಹೇರಿದೆ. ಇದರಿಂದ 125 ಮಾನವ ದಿನಗಳ ಕೆಲಸ ಒದಗಿಸುವುದಾಗಿ ಹೊಸ ಕಾಯ್ದೆಯಲ್ಲಿ ಹೇಳಲಾಗಿದ್ದರೂ, ವಾಸ್ತವವಾಗಿ 50 ಮಾನವ ದಿನಗಳ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸಬೇಕಾಗುತ್ತದೆ. ಇದು ಒಕ್ಕೂಟ ವ್ಯವಸ್ಥೆಯ ರಚನೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಹಾಗೂ ಸಂವಿಧಾನದ ಅನುಚ್ಛೇದ 258 ಮತ್ತು ಅನುಚ್ಛೇದ 280 ಗಳನ್ನು ಸ್ಪಷ್ಟ ಉಲ್ಲಂಘನೆ ಮಾಡಿದೆ.

ಆದುದರಿಂದ, ಈ ಮೇಲೆ ನಮೂದಿಸಿದ ಪ್ರಮುಖ ಕಾರಣಗಳಿಂದ ಕೇಂದ್ರದ ಈ ನಡೆಯನ್ನು ಈ ಸದನವು ತೀವ್ರವಾಗಿ ವಿರೋಧಿಸುತ್ತದೆ.

ಈ ಮೇಲ್ಕಂಡ ಎಲ್ಲ ಗಂಭೀರ ಅಂಶಗಳನ್ನು ಪರಿಗಣಿಸಿ, ಕರ್ನಾಟಕ ರಾಜ್ಯದ ಗ್ರಾಮೀಣ ಜನರ ಬದುಕಿನ ಹಕ್ಕನ್ನು ಕಾಪಾಡುವ ದೃಷ್ಟಿಯಿಂದ, ಒಕ್ಕೂಟ ತತ್ವಕ್ಕೆ ವಿರೋಧವಾಗಿರುವ ಮತ್ತು ರಾಜ್ಯದ ಬೊಕ್ಕಸಕ್ಕೆ ತೀವ್ರ ಹೊರೆ ಉಂಟುಮಾಡುವ ಮತ್ತು ವಿಕೇಂದ್ರೀಕರಣ ತತ್ವಕ್ಕೆ ವಿರುದ್ಧವಾಗಿರುವ ಗ್ರಾಮ ಪಂಚಾಯಿತಿಗಳ ಅಧಿಕಾರ ಮತ್ತು ಹಕ್ಕುಗಳನ್ನು ಕಸಿದುಕೊಂಡಿರುವ ವಿಕಸಿತ್ ಭಾರತ್ ಗ್ಯಾರಂಟಿ ಫಾರ್ ರೋಜ್ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) (VB-GRAM-G) ಕಾಯ್ದೆಯನ್ನು ಕೇಂದ್ರ ಸರ್ಕಾರವು ತಕ್ಷಣವೇ ರದ್ದುಗೊಳಿಸಬೇಕು ಹಾಗೂ ಗ್ರಾಮೀಣ ಆಸ್ತಿ ಸೃಜನೆಗೆ ಮತ್ತು ಬಡವರ ಸ್ವಾವಲಂಬನೆಗೆ ಕಾರಣವಾಗಿದ್ದ "ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು (MGNREGA)" ಈ ಹಿಂದಿನಂತೆ ಅದರ ಮೂಲ ಸ್ವರೂಪದಲ್ಲಿಯೇ ಮರುಸ್ಥಾಪಿಸಬೇಕು ಎಂದು ಈ ಸದನವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ."

**ನಿರ್ಣಯವನ್ನು ಸದನವು ದಿನಾಂಕ:04.02.2026 ರಂದು ಅಂಗೀಕರಿಸಿರುತ್ತದೆ.**

M.K. Vishalakshi

**(ಎಂ.ಕೆ.ವಿಶಾಲಾಕ್ಷಿ)**

**ಕಾರ್ಯದರ್ಶಿ,**

**ಕರ್ನಾಟಕ ವಿಧಾನಸಭೆ**

"Extract from the proceedings of the Karnataka Legislative Assembly held on 04th February, 2026"

## OFFICIAL RESOLUTION

### By Shri. Siddaramaiah (Hon'ble Chief Minister):-

"This House reiterates absolute full commitment towards the Panchayath Raj system and the principles of decentralization of power, which are the secured foundation for Indian democracy. This House takes the most serious view of the repeal of the "Mahatma Gandhi National Rural Employment Guarantee Act" (MGNREGA), which was a 'Sanjeevini' for the rural poor and an integral part of rural life. The new 'VB-GRAM-G' Act, unilaterally implemented by the Central Government, is detrimental to the basic ideals of the federal system and the right to livelihood of the rural people.

Then UPA government led by Dr. Manmohan Singh had implemented the Mahathma Gandhi National Rural Employment Guarantee Act in 2005, in order to provide financial security to the rural poor families. This scheme has brought about a revolutionary change by eliminating unemployment, stopping migration, providing wages without gender discrimination, strengthening decentralization of Panchayath and creating individual and community assets of the rural people.

The new law violates the right to life and the right to livelihood under Article 21 of the Constitution and by taking away the powers and autonomy given to the Gram Panchayats through the 73rd Amendment to the Constitution, it is not only against the intention of the 73rd Amendment to the Constitution but also defeats the objective of Gram Swaraj as envisioned by Mahatma Gandhi the Father of the Nation. In the MGNREGA Act, the Central Government was absolutely providing 100 percent of the wages for 100 human-days. The Central Government has suddenly imposed a rule that the state governments should bear 40 percent of the grant without consulting the states. Due to this, eventhough the work for 125 human-days are provided in the new Act, the cost of 50 human-days to be borne by the State Governments, This will have a serious impact on the structure of the federal system and is a clear violation of Articles 258 and 280 of the Constitution

Karnataka is the second highest tax paying state in the country. Since our Gram Panchayats are collecting the highest tax, Karnataka stands first in the country. Our State is also the first in implementing the decentralization system in a coherent manner.

The 14th Finance Commission has recommended a tax share of 4.71 percent for Karnataka. It has been reduced to 3.64 percent in the 15th Finance Commission. Now, although the 16th Finance Commission has recommended a share of 4.131 per cent, it is 14.1 percent less than the 14th Finance Commission recommendation. In such critical times, imposing a 40 percent burden on the state in implementation of the scheme through a new law is an attempt to jeopardize the State's economic security and development.

In the Mahatma Gandhi National Rural Employment Guarantee Act, employment was a 'right' and 'demand' based on every individual. But in the new act, this has been made subject to the norms formulated by the Central Government, thereby taking away the rights of the people. The power of the Gram Sabhas have been taken away, through plans formulated by sitting in the ivory tower of Delhi. The Gram Panchayats have lost the freedom to select the works as per their needs. The scheme is being implemented only in the Panchayats selected by the central government, and the right to employment has been denied in the rest of the panchayats.

Locally needed rural assets such as our farmland, our roads, cowsheds, sheep sheds, granaries, school compounds, toilets, fieldends, flow-barriers, Panchayat buildings (Rajiv Gandhi Seva Kendras), horticultural crops, playgrounds were being built under the Mahatma Gandhi National Rural Employment Guarantee Act. Since the new Act is linked to the 'PM Gatishakti' scheme, it is being used for the construction of major roads and highways, which has indirectly turned into a scheme that benefits contractors and corporate companies. It is a scheme that snatches food from the hands of the poor to make the rich into much richer.

This new Act allows work for only 10 months in a year instead of 12 months. There is no certainty that all Gram Panchayats will be included under the VB-Gram-G Act and there is no assurance / guarantee about

the wage rate paid to the workers. This uncertainty has deprived the rights of rural wage workers, especially women, Scheduled Caste and Scheduled Tribe workers, tribals, and farmers. It is an attempt to push rural wage workers into modern slavery.

Therefore, this House strongly opposes this move of the Central Government due to the important reasons explained above.

By considering all the above facts and in view of protecting the right to life of the rural people of Karnataka, this House urges the Central Government to immediately repeal the Vikasit Bharat Guarantee for Employment and Livelihood Mission (Gramin) (VB-GRAM-G) Act, which is against the federal principle, is a severe burden on the state exchequer and is against the principle of decentralization, and has taken away the powers and rights of the Gram Panchayats, and to reinstate the "Mahatma Gandhi National Rural Employment Guarantee Act (MGNREGA)" in its original form, which has led to rural asset creation and self-reliance of the poor.

**The resolution has been passed by the House on 04.02.2026.**

(sd/-)
**(M.K. Vishalakshi)**
**Secretary,**
**Karnataka Legislative Assembly.**

ಡಾ. ಶಾಲಿನಿ ರಜನೀಶ್. ಭಾ.ಆ.ಸೇ.
ಮುಖ್ಯ ಕಾರ್ಯದರ್ಶಿ
Dr. SHALINI RAJNEESH, I.A.S.
Chief Secretary

ಕರ್ನಾಟಕ ಸರ್ಕಾರ
Government of Karnataka

D.O. No: RDC 59 EGS 2021 (P-4) Date: 06 Mar 2026

**Dear Shailesh Kumar Singh ji,**

**Sub:** Pending MGNREGS Material component releases to Government of Karnataka – Reg.

**Ref:**
1. Provisional Utilization certificate for Material component was submitted to MoRD on 21.01.2026.
2. Audited Utilization Certificate and Annual accounts for the financial year 2024-25 were submitted to MoRD on 04.11.2025.
3. D.O Letter dated 07 Feb 2026 from Commissioner, Rural Development Commissionerate, addressed to Joint Secretary (RE) MoRD.
4. D.O Letter No: RDC 59 EGS 2021 (P-4) dated 17 Feb 2026 from Secretary RDPR, Government of Karnataka addressed to Joint Secretary (RE) MoRD.

*****

With respect to the above subject, I would like to state that the Rural Development Commissionerate, Government of Karnataka has submitted Utilization Certificate and Annual Audited accounts for the financial year 2024-25 and also the Provisional utilisation certificate for the 1st instalment of 2025-26 to the Ministry of Rural Development (MoRD) as per the ref (1) and (2), with a request to release the next instalment of Rs. 107699.58 lakhs.

The material grant of Rs. 32357.00 lakhs were released to Karnataka on 03 Jun 2025. Material expenditure as per SNA Sparsh report is 28159.15 lakhs, i.e., 87.03% as on 04th March 2026. However, there is a cumulative liability of Rs. 129928.92 lakhs as per MIS report as on 04 Mar2026 and the same needs to be cleared at the earliest. The available balance with the state as on date is Rs. 4197.84 lakhs which is distributed among all 5958 Gram Panchayats (GPs) of

ಕೊಠಡಿ ಸಂಖ್ಯೆ: 320, 3ನೇ ಮಹಡಿ, ವಿಧಾನಸೌಧ, ಬೆಂಗಳೂರು – 560 001, ದೂರವಾಣಿ ಕಛೇರಿ: +91-80-22252442 / 22033300 ಫ್ಯಾಕ್ಸ್: +91-80-22258913
Room No. 320, 3rd Floor, Vidhana Soudha, Bengaluru - 560 001, Phone. off. +91-80-22252442 / 22033300 Fax: +91-80-22258913
E-mail : cs@karnataka.gov.in

the State. The balance available with each GP is not sufficient enough to make the payment of even the minimum bill available with them, and hence further expenditure cannot be done in most of the GPs.

In this regard, Commissioner, Rural Development Commissionerate and Secretary RDPR, Government of Karnataka have written the D.O letters to Joint Secretary (RE), MoRD as mentioned at sl. No 3 and 4 of the reference requesting to release the grant at the earliest.

In view of the above and also as the financial year end is approaching, I request your personal intervention to release the next installment of Rs. 107699.58 lakhs under Material Component to the State at the earliest.

I shall be grateful for the same.

**With warm regards,**

**Yours sincerely,**

Shal

**To:**

**Sri Shailesh Kumar Singh, IAS.**
Secretary.
Ministry of Rural Development,
Government of India, Kartavya Bhavan,
New Delhi-110001.

ಡಾ. ಸಮೀರ್ ಶುಕ್ಲಾ, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿ
Dr. Sameer Shukla, I.A.S.,
Secretary to Government

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

D.O. Letter No: RDC 59 EGS 2021 (P-4)

Date: 12-03-2026.

Dear Rohini,

Sub:- Release of pending MGNREGS Wage component to Karnataka State – Reg.

Ref:- Rural Development Commissionerate letter No. RDP-EGS/59/2020-21, Dt: 13-02-2026

********

With respect to the above subject, I would like to bring to your notice that the Ministry of Rural Development (MoRD) has sanctioned a total of Rs 3714.68 crores to the state of Karnataka out of which an amount of Rs.2942.49 crore has been released to the state through daily sanction orders.

The last sanction order issued to the State of Karnataka was on 13 Jan 2026 for an amount of Rs.9.31 crores and thereafter no new sanction orders have been issued for the payment of Wage Component to the State. The total expenditure as per the Bank statement stands at Rs.2942.49 crores and the accumulated wages pending for payment as on 11 Mar 2026 in the state isRs.330.91 crores. As a result, laborers are approaching Rural Development Commissionerate/Secretariat for the payment of Wages.

In this regard, Commissioner, Rural Development Commissionerate, Government of Karnataka has written a letter to Director (NREGA), MoRD as mentioned in the reference above requesting to release the grant at the earliest.

In view of the above it is requested to kindly release the pending payment of Rs.330.91crores under Wage Component to the state at the earliest.

I shall be grateful for the same.

With warm regards,

Yours sincerely,

Ms. Rohini R Bhajibhakare, IAS.,
Joint Secretary (NREGA).
Ministry of Rural Development,
Government of India, Kartavya Bhavan,
New Delhi-110001.

3ನೇ ಮಹಡಿ, 3ನೇ ಗೇಟ್, ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
M.S. Building, 3rd Floor, Gate No. 3, Dr. B.R. Ambedkar Veedhi, Bengaluru - 560 001
Tel.: 080-22353929/2203 2446, e-mail: principalsecretaryrdpr@gmail.com/prs-rdpr@gov.in

ಡಾ. ಸಮೀರ್ ಶುಕ್ಲ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
Dr. Sameer Shukla, I.A.S.,
Secretary to Government

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

D.O.No: RDC 59 EGS 2021 (P-4)

Date: 17-02-2026

Dear Rohini,

**Sub:** Pending MGNREGS Material component releases to Government of Karnataka – Reg.

**Ref:**
3. Provisional Utilization certificate for Material component was submitted to MoRD on 21.01.2026.
4. Audited Utilization Certificate and Annual accounts for the financial year 2024-25 were submitted to MoRD on 04.11.2025.

*****

With respect to the above subject, the Rural Development Commissionerate, Government of Karnataka has submitted Utilization Certificate and Annual Audited accounts for the financial year 2024-25 and also the Provisional utilisation certificate for the 1st instalment of 2025-26 to the Ministry of Rural Development (MoRD) vide ref (1) and (2) with a request to release the next instalment of Rs. 107699.58 lakhs.

The Material grant of Rs. 32357.00 lakhs was released to Karnataka on 03 Jun 2025. Material Expenditure as per SNA Sparsh report is 27489.57 lakhs i.e., 84.96% as on 12th February 2026. Further expenditure is not possible in many Gram Panchayats (GPs) as the amount available in the GPs is less than the minimum amount required to clear the bill in that GP. The cumulative liability as on date for material bill payment is Rs. 118196.42 lakhs.

In light of the above, I request your personal intervention to release the next instalment of Rs. 107699.58 lakhs under Material Component at the earliest.

I shall be grateful for the same.

With warm regards,

Yours Sincerely,

(Dr. Sameer Shukla)

Ms. Rohini R Bhajibhakare, IAS.,
Joint Secretary (MGNREGA)
Ministry of Rural Development,
Government of India, Kartavya Bhavan,
New Delhi-110001.

Wages

Government of Karnataka
Commissionerate of Rural Development
Rural Development and Panchayat Raj Department
5th floor south block IT Park Rajajinagar Industrial Layout Bangalore
Phone No: 080-22372738, e-mail: karnregs.finance@gmail.com

No. RDP-EGS/59/2020-21 Date: 13-02-2026

**To,**
The Director (MGNREGA)
Ministry of Rural Development,
Government of India
Krishi Bhawan,New Delhi

**Respected Sir,**

**Subject**: Requesting to release wage payments to the State of Karnataka.

******

With the reference to the above subject, the Ministry of Rural Development (MoRD) has sanctioned a total of Rs. 3714.68 crores to the state of Karnataka. Out of which an amount of Rs. 2941.27crores has been released to the state through daily sanction orders, leaving a balance of Rs. 773.41crores. Last sanction order was on 13.01.2026 since then, the state of Karnataka has not received any new sanction orders. As a result, pending wages at the bank has accumulated to Rs. 245.18 crores as on12-02-2026. Consequently, laborers are approaching this office for the release of payment.

In view of the above it is requested to release the pending sanctioned amount to ensure that the wage payments are made on time.

Yours faithfully,

Anselly

**Commissioner, Rural Development**
**Rural Development & Panchayat Raj Department,**
**Government of Karnataka**

**Encl:** - Mother Sanction Orders to the State of Karnataka.

Admn

Government of Karnataka
Commissionerate of Rural Development
Rural Development and Panchayat Raj Department
5TH floor south block IT Park Rajajinagar Industrial layout Bangalore
Phone No: 080-22372738, e-mail : karnregs.finance@gmail.com

No. RDP 59 EGS 2021 (P-3) Dated:06.03.2026

To,

The Director (Mahatma Gandhi NREGA)
MoRD, Krishi bhavan
New Delhi

Dear Sir,

Subject: Submission of Provisional utilization certificates for Admin Component for the Financial Year 2025-26-reg

******

With Reference to the above cited subject, Provisional utilization certificates of Admin Component for the Financial Year 2025-26 is furnished as below

**Annexure**

| Sl No | Utilization Certificates and Annexure | Enclosed |
|---|---|---|
| 1 | Annexure-A Status of Receipt and Expenditure of Funds by the State | YES |
| 2 | Annexure – B check list on prerequisites/documents for release of 2nd tranche 2025-26 | YES |
| 3 | Annexure –C check list prerequisites/documents for release of 2nd tranche 2025-26 | YES |
| 4 | MGNREGA SPARSH 03: Mother Sanction vs Central Share Release (Drill-1A) | YES |
| 5 | Certificate to certify that the grants released during 2025-26 has been used utilized for the purpose it was released | YES |
| 6 | Certificate to certify that the grants released that there were no diversion and embezzlement of programme funds during the FY 2025-26 | YES |
| 7 | Certificate to certify that the compliance of ministry clarification /suggestion /advice /observation issued from time to time are implemented in MGNREGS KARNATAKA | YES |
| 8 | Certificate to certify the accounts of Financial Year before 2017 have been settled. | YES |
| 9 | Annexure -27 Check list on prerequisites/documents for release of 2nd tranche | YES |
| 10 | SNA Sparsh Report -03 | YES |
| 11 | Annexure-25 Provisional UC | YES |

Yours faithfully,

Anselvr

Commissioner, Rural Development
Rural Development and Panchayat Raj Department
Government of Karnataka

Material

Government of Karnataka
Commissionerate of Rural Development
Rural Development and Panchayat Raj Department
5th floor south block IT Park Rajajinagar Industrial layout Bangalore
Phone No: 080-22372738, e-mail : karnregs.finance@gmail.com

No. RDP 59 EGS 2021 (P-3) Dated: 19.01.2026

To,

The Director (Mahatma Gandhi NREGA)
MoRD, Krishi bhavan
New Delhi

Dear Sir,

Subject: Submission of Provisional utilization certificates for Material Component for the Financial Year 2025-26-reg

******

With Reference to the above cited subject, Provisional utilization certificates of Material Component for the Financial Year 2025-26 is furnished as below

**Annexure**

| Sl No | Utilization Certificates and Annexure | Enclosed |
|---|---|---|
| 1 | Annexure-A Status of Receipt and Expenditure of Funds by the State | YES |
| 2 | Annexure – B check list on prerequisites/documents for release of 2nd tranche 2025-26 | YES |
| 3 | Annexure –C check list prerequisites/documents for release of 2nd tranche 2025-26 | YES |
| 4 | MGNREGA SPARSH 03: Mother Sanction vs Central Share Release (Drill-1A) | YES |
| 5 | Certificate to certify that the grants released during 2025-26 has been used utilized for the purpose it was released | YES |
| 6 | Certificate to certify that the grants released that there were no diversion and embezzlement of programme funds during the FY 2025-26 | YES |
| 7 | Certificate to certify that the compliance of ministry clarification /suggestion /advice /observation issued from time to time are implemented in MGNREGS KARNATAKA | YES |
| 8 | Certificate to certify the accounts of Financial Year before 2017 have been settled. | YES |
| 9 | Annexure -27 Check list on prerequisites/documents for release of 2nd tranche | YES |
| 10 | SNA Sparsh Report -03 | Yes |

Yours faithfully,

Commissioner, Rural Development
Rural Development and Panchayat Raj Department
Government of Karnataka